ಪರೀಕ್ಷಕರು ಅಥವಾ ಪಶು ಸಹಾಯಕರು ಮತ್ತು ನಾಲ್ಕನೇ ದರ್ಜೆ ನೌಕರರು, ಅದನ್ನೂ ಕೂಡ ಈಗ ಮಾಡುತ್ತಾ ಇದ್ದೇವೆ, ತಕ್ಷಣ ಮಾಡಿ ಕೊಡುತ್ತೇವೆ.

ಅಧ್ಯಕ್ಷರು : ಸಿಬ್ಬಂದಿ ವರ್ಗದವರ ವಸತಿ ಬಗ್ಗೆ.

ಶ್ರೀ ಬಿ.ಬಿ. ನಿಂಗಯ್ಯ : ತಮಗೆ ಗೊತ್ತಿರುವಂತೆ ನಮ್ಮ ಇಲಾಖೆ ಜನಾರೋಗ್ಯಕ್ಕೆ ಸಮಾನವಾದ ಒಂದು ಇಲಾಖೆ, ರಾಜ್ಯದಲ್ಲಿ ಅನುಕೂಲ ಮಾಡಿ ಕೊಟ್ಟಿಲ್ಲ. ಇದರ ಬಗ್ಗೆ ಸರ್ಕಾರದ ಪರಿಶೀಲನೆಯಲ್ಲಿದೆ, ಮುಂದೆ ಕ್ರಮ ಕೈಗೊಳ್ಳುತ್ತೇವೆ.

ವಿಟ್ಲ ಮತಕ್ಷೇತ್ರದ ನರಹರಿ ಬೆಟ್ಟ ಕುರಿತು

303 - ಶ್ರೀ ಎ. ರುಕ್ಮಯ ಪೂಜಾರಿ (ವಿಟ್ಲ) : ಮಾನ್ಯ ಪ್ರವಾಸೋದ್ಯಮ, ಕನ್ನಡ ಮತ್ತು ಸಂಸ್ಕೃತಿ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ದಕ್ಷಿಣ ಕನ್ನಡ ಜಿಲ್ಲೆಯ ವಿಟ್ಲ ಮತ ಕ್ಷೇತ್ರಕ್ಕೆ ಸೇರಿದ ನರಹರಿಬೆಟ್ಟವನ್ನು ಪ್ರವಾಸೋದ್ಯಮ ಕೇಂದ್ರವನ್ನಾಗಿ ಮಾಡಲು ಎಲ್ಲಾ ತರಹದ ಅನುಕೂಲತೆಗಳಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ?

ಆ) ಬಂದಿದ್ದರೆ ಪ್ರವಾಸೋದ್ಯಮ ಕೇಂದ್ರವನ್ನಾಗಿ ಮಾಡಲು ಸರ್ಕಾರವು ಕ್ರಮ ತೆಗೆದುಕೊಳ್ಳುವುದೇ?

ಶ್ರೀಮತಿ ಲೀಲಾದೇವಿ ಆರ್. ಪ್ರಸಾದ್ (ಪ್ರವಾಸೋದ್ಯಮ, ಕನ್ನಡ ಮತ್ತು ಸಂಸ್ಕೃತಿ ರಾಜ್ಯಸಚಿವರು) :

ಅ) ಹೌದು.

ಆ) ರಾಜ್ಯದಲ್ಲಿ ದಿನಾಂಕ 1-6-97ರಿಂದ ನೂತನ ಪ್ರವಾಸೋದ್ಯಮ ಕಾರ್ಯನೀತಿ ಜಾರಿಗೆ ಬಂದಿದೆ. ಇದರಂತೆ ವಿಟ್ಲದ ನರಹರಿ ಬೆಟ್ಟವನ್ನು 'ಬಿ' ಗುಂಪಿಗೆ ಸೇರಿಸಲಾಗಿದೆ. ಈ ಸ್ಥಳದಲ್ಲಿ ಸ್ಥಾಪಿಸಲಾಗುವ ಪ್ರವಾಸೋದ್ಯಮ ಯೋಜನೆಗಳಿಗೆ ಶೇಕಡ 15ರಷ್ಟು ಗರಿಷ್ಟ ರೂ. 15.00 ಲಕ್ಷಗಳನ್ನು ಬಂಡವಾಳ ಹೂಡಿಕೆ ಸಬ್ಸಿಡಿ ನೀಡಲಾಗುವುದು ಹಾಗೂ 3 ವರ್ಷದವರೆಗೆ ಮಾರಾಟ, ತೆರಿಗೆ, ವಿಲಾಸಿ ತೆರಿಗೆ, ವಿನಾಯಿತಿ ಮತ್ತು ವಿದ್ಯುತ್ ದರಗಳಲ್ಲಿ ರಿಯಾಯಿತಿ ನೀಡಿ ಪ್ರೋತ್ಸಾಹಿಸಲಾಗುವುದು.

ಶ್ರೀ ರುಕ್ಮಯ್ಯ ಪೂಜಾರಿ : ಸನ್ಮಾನ್ಯ ಅಧ್ಯಕ್ಷರೇ, ನರಹರಿ ಬೆಟ್ಟ ಅತ್ಯಂತ ಎತ್ತರದಲ್ಲಿರುವಂಥ ಒಂದು ಗುಡ್ಡ ಪ್ರದೇಶ. ಅಲ್ಲಿ ಈಶ್ವರ ದೇವಸ್ಥಾನ ಇದೆ. ಹಿಂದೆ ಪಾಂಡವರು ಇದ್ದಾಗ, ಆ ಬೆಟ್ಟಕ್ಕೆ ಬಂದು, ಅಲ್ಲಿ ಶಂಖ ಚಕ್ರ ಗಧಾ ಪದ್ಮ ಕೆರೆಯನ್ನೂ ನಿರ್ಮಾಣ ಮಾಡಿದ್ದಾರೆ, ಈಗ ಆಟಿ ಅಮಾವಾಸ್ಯೆ ಮತ್ತು ಸೋಣಾ ಅಮಾವಾಸ್ಯೆ ಸಂದರ್ಭದಲ್ಲಿ ಸಾವಿರಾರು ಜನ ಬಂದು, ಅಲ್ಲಿ ತೀರ್ಥಸ್ನಾನ ಮಾಡಿ, ದೇವರ ಅನುಗ್ರಹವನ್ನು ಪಡೆಯುತ್ತಿದ್ದಾರೆ. ಅದು ಮಾತ್ರವಲ್ಲ., ಅದರ ಸುತ್ತಮುತ್ತ ಕಾಡು ಪ್ರದೇಶ ಇದೆ. ಪಕ್ಕದಲ್ಲೇ ರಾಷ್ಟ್ರೀಯ ಹೆದ್ದಾರಿ ಹಾದು ಹೋಗುತ್ತಿದೆ, ಪಕ್ಕದಲ್ಲೇ ನೇತ್ರಾವತಿ ನದಿ ಹರಿಯುತ್ತಿದೆ. ಈ ಎಲ್ಲಾ ದೃಷ್ಟಿಯಿಂದ ಅದೊಂದು ಅತ್ಯಂತ ಆಕರ್ಷಣೀಯ ಪ್ರವಾಸಿ ಕೇಂದ್ರವನ್ನಾಗಿ ಮಾಡುವುದಕ್ಕೆ ಬೇಕಾದ ಎಲ್ಲಾ ವ್ಯವಸ್ಥೆ ಇದೆ. ಇದನ್ನು ಆದಷ್ಟುಬೇಗ ಪ್ರವಾಸಿ ಕೇಂದ್ರವನ್ನಾಗಿ ಮಾಡಬೇಕೆಂದು ನಾನು

ಕೇಳಿದ್ದೇನೆ. ತಾವು ಕಳೆದ ವರ್ಷ ನೂತನ ಪ್ರವಾಸೋದ್ಯಮ ನೀತಿ ಜಾರಿಗೆ ಬಂದಿದೆ ಎಂದು ತಿಳಿಸಿದ್ದೀರಿ. ಅದರಲ್ಲಿ 'ಬಿ' ಗ್ರೂಪ್‌ನಲ್ಲಿ ಇದನ್ನು ಸೇರಿಸಿದ್ದೀರಿ. 'ಎ' ಗ್ರೂಪಿನಲ್ಲಿ ಇದನ್ನು ಸೇರಿಸಿ ಆದಷ್ಟು ಬೇಗ ಪ್ರವಾಸೋದ್ಯಮ ಕೇಂದ್ರವನ್ನಾಗಿ ಮಾಡಬೇಕೆಂದೂ, ಅದರ ಕೆಳಪ್ರದೇಶ ಏನಿದೆ ಅದನ್ನೂ, ಅಕ್ವೈರ್ ಮಾಡಿಕೊಂಡು ಅದನ್ನು ಒಂದು ಆಕರ್ಷಣೀಯ ಕೇಂದ್ರವನ್ನಾಗಿ ಮಾಡಬೇಕೆಂದು ನಾನು ಸರ್ಕಾರವನ್ನು ಒತ್ತಾಯಿಸುತ್ತೇನೆ.

ಶ್ರೀ ಎಂ. ಸಿ. ನಾಣಯ್ಯ (ಪ್ರವಾಸೋದ್ಯಮ ಮತ್ತು ಕನ್ನಡ ಸಂಸ್ಕೃತಿ ರಾಜ್ಯ ಸಚಿವರ ಪರವಾಗಿ) : ಅಧ್ಯಕ್ಷರೇ, ಇಲ್ಲಿ ಮೂರು ದೇವಸ್ಥಾನಗಳಿವೆ. ಒಂದು ವೆಂಕಟರಮಣ ದೇವಸ್ಥಾನ, ರಾಮ ಸೀತಾ ದೇವಸ್ಥಾನ ಮತ್ತು ಮಹಲಿಂಗೇಶ್ವರ ದೇವಸ್ಥಾನ. ಪಕ್ಕದಲ್ಲೇ ಒಂದು ಮಸೀದಿ ಕೂಡ ಇದೆ. ಸುಮಾರು 25 ಕಿಲೋಮೀಟರ್, ಪಹಣೆ ಮಂಗಳೂರು ಪಕ್ಕದಲ್ಲಿರತಕ್ಕ ಸ್ಥಳ ಈ ಬೆಟ್ಟ. ನಮ್ಮ ಪ್ರವಾಸೋದ್ಯಮ ನೀತಿಯಲ್ಲಿ ಇದನ್ನು 'ಬಿ' ಗುಂಪಿನಲ್ಲಿ ಸೇರಿಸಿದ್ದೇವೆ. ಅವರು 'ಎ'ಗೆ ಸೇರಿಸಬೇಕೆಂದು ಹೇಳಿದ್ದಾರೆ. ನಮ್ಮ ಪ್ರವಾಸೋದ್ಯಮ ನೀತಿ ಹೇಗೆಂದರೆ 'ಎ' ಎಂದು ಹೇಳಿದರೆ ಬಹಳ ಕೆಳ ಹಂತದಲ್ಲಿರತಕ್ಕಂತಾದ್ದು 'ಬಿ' ಎರಡನೆಯದು; 'ಸಿ' ಮೂರನೆಯದು; 'ಡಿ' ನಾಲ್ಕನೆಯದು. ಇದು ಕೆಳಭಾಗದಿಂದ ಮೇಲ್ಭಾಗಕ್ಕೆ ಹೋಗತಕ್ಕಂಥಾದ್ದು. ತಾವು 'ಎ' ಕೇಳಿಬಿಟ್ಟಿರಿ. ಕೇಳಬೇಕಾಗಿರತಕ್ಕಂಥಾದ್ದು 'ಬಿ' ಕೇಳಬೇಕಾಗಿತ್ತು. ಪ್ರವಾಸೋದ್ಯಮ ನೀತಿಯ ಅಡಿಯಲ್ಲಿ ಸುಮಾರು 15 ಲಕ್ಷ ರೂಪಾಯಿಯೊಳಗೆ ಯಾವುದಾದರೂ ಇನ್‌ಫ್ರಾಸ್ಟ್ರಕ್ಚರ್ ಮಾಡಬೇಕಾಗಿರತಕ್ಕಂಥಾದ್ದು, ಒಂದು ಸಮಯ ಎಲ್ಲಾದರೂ ಅಲ್ಲಿ ಒಂದು ಹೋಟೆಲ್ ತೆರೆಯಬೇಕಾಗಿರತಕ್ಕಂತಾದ್ದು, ಚಪ್ಪರ ಕಟ್ಟಿಸುವುದಕ್ಕೆ ಸರ್ಕಾರದವರು ಸಬ್ಸಿಡಿಯನ್ನು ಕೊಡುತ್ತಾ ಇದ್ದಾರೆ. ಬಹುಶಃ ಈ ಜಾಗವನ್ನು ಸ್ವಲ್ಪಮಟ್ಟಿಗೆ ಬೆಳೆಸಬೇಕೆಂಬ ಹಿನ್ನೆಲೆಯಲ್ಲಿ, ಸರ್ಕಾರ ತಾವು ಹೇಳತಕ್ಕಂಥ ಸಲಹೆಯನ್ನು ಒಪ್ಪಿ ಸ್ವಲ್ಪಮಟ್ಟಿಗೆ ಸರ್ಕಾರದ ವತಿಯಿಂದಲೇ ಈ ಇನ್‌ಫ್ರಾಸ್ಟ್ರಕ್ಚರ್‌ನ್ನು ಡೆವಲಪ್‌ಮೆಂಟ್ ಮಾಡುವುದಕ್ಕೆ ಕಾರ್ಯಕ್ರಮವನ್ನು ಕೈಗೊಳ್ಳುವುದಕ್ಕೆ ಸರ್ಕಾರ ಕ್ರಮವನ್ನು ಕೈಗೊಳ್ಳುತ್ತದೆ.

ಶ್ರೀ ರುಕ್ಮಯ್ಯ ಪೂಜಾರಿ : ಪ್ರವಾಸೋದ್ಯಮ ಕಾರ್ಯನೀತಿ ತಾವು ಹೇಳಿದಹಾಗೆ, ಪ್ರಥಮ ಹಂತದ ಕಾರ್ಯನೀತಿ. ನೀವು ಹೇಳಿದಹಾಗೆ 'ಬಿ' ಗ್ರೂಪಿನಲ್ಲಿ ಸೇರಿಸಬೇಕೆಂದು ನಾನು ಪುನಃ ಒತ್ತಾಯಿಸುತ್ತೇನೆ. ನಾನು ಪ್ರಾರಂಭದಲ್ಲಿ ಹೇಳಿದಹಾಗೆ 'ಎ' ಗ್ರೂಪ್ ಅಲ್ಲ, 'ಬಿ' ಗ್ರೂಪ್.

ಶ್ರೀ ಎಂ.ಸಿ. ನಾಣಯ್ಯ : ಎ,ಬಿ, ಸಿ ಮತ್ತು ಡಿ ಗ್ರೂಪ್ ಅಂದರೆ ಮೇಲಿನಿಂದ ಕೆಳಭಾಗಕ್ಕೆ ಬರತಕ್ಕಂತಾದ್ದು. ಬಹುಶಃ ಇವತ್ತಿಗೆ ನಮ್ಮ ಪ್ರವಾಸೋದ್ಯಮ ನೀತಿ 'ಬಿ' ಗ್ರೂಪಿನಲ್ಲಿ ಇದೆ. ಈ ಗ್ರೂಪಿಗೆ ಸೇರತಕ್ಕಂಥ ಕೆಲವು ಪ್ರವಾಸಿ ಕೇಂದ್ರಗಳನ್ನು ಮಾಡಿದ್ದೇವೆ. ಬಹುಶಃ ಇವತ್ತಿಗೆ ಅದು 'ಬಿ' ಗ್ರೂಪಿನಲ್ಲಿ ಬರುತ್ತಾ ಇದೆ. ಮುಂದೆ ಬರತಕ್ಕಂಥ ದಿನಗಳಲ್ಲಿ ಅದನ್ನು 'ಸಿ' ಗ್ರೂಪಿಗೆ ಮಾಡುವುದಕ್ಕೆ ನಾವು ಪ್ರಯತ್ನ ಪಡುತ್ತೇವೆ.

ತುಮಕೂರು ಹಾಲು ಉತ್ಪಾದಕರ ಸಹಕಾರ ಸಂಘದಲ್ಲಿ ಹಸುಗಳ ಖರೀದಿಯಲ್ಲಿ ದುರುಪಯೋಗ

304 - ಶ್ರೀ ಟಿ.ಬಿ. ಜಯಚಂದ್ರ (ಕಳ್ಳಂಬೆಳ್ಳ) : ಮಾನ್ಯ ಪಶುಸಂಗೋಪನಾ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?